ಗಳನ್ನು ಮಂಜೂರು ಮಾಡಿದ್ದಾರೆ. ಅದರಲ್ಲಿ ಹಣವನ್ನು ಒದಗಿಸಿ ಆ ಪ್ರದೇಶದಲ್ಲಿ ಏನು ಕಾರ್ಯಗಳನ್ನು ಮಾಡಿಸಬೇಕೋ ಅವನ್ನು ಮಾಡಿಸುವುದಕ್ಕೆ ಸಿದ್ಧರಾಗಿದ್ದೇವೆ.

Underground Drainage Scheme for Kolar Town

Q—434. Sri P. VENKATAGIRIYAPPA (Kolar).—

Will the Government be pleased to state :—

(*a*) when the Underground Drainage Scheme was sanctioned to Kolar Town and what is the estimated cost ;

(*b*) the amount spent for the scheme up to the end of November 1963 ;

(*c*) the amount required to complete the work ;

(*d*) the time required to complete the work ?

A.—Sri K. PUTTASWAMY (Minister for Municipal Administration).—

(*a*) (i) The Underground Drainage Scheme for Kolar Town was sanctioned in August 1955.

(ii) Its cost is Rs. 7.5 lakhs.

(*b*) Rs. 5,82,018.

(*c*) Rs. 3,49,982.

(*d*) The work is expected to be completed by the end of March 1965.

ಶ್ರೀ ಪಿ. ವೆಂಕಟಗಿರಿಯಪ್ಪ.—ಕೋಲಾರ ಟೌನಿಗೆ ಸಂಬಂಧಪಟ್ಟಂತೆ ಒಳಚರಂಡಿ ಯೋಜನೆಯನ್ನು 1 55ನೇ ಇಸವಿಯಲ್ಲಿ ಮಂಜೂರು ಮಾಡಲಾಯಿತು, ಮತ್ತು ಆ ಕಾಮಗಾರಿಯನ್ನು 1965ನೇ ಇಸವಿಯ ಮಾರ್ಚಿ ತಿಂಗಳ ಅಂತ್ಯದೊಳಗಾಗಿ ಪೂರ್ತಿಗೊಳಿಸುವುದಾಗಿ ನಿರೀಕ್ಷಿಸಲಾಗಿದೆ ಎಂದು ಹೇಳಿದ್ದೀರಿ. 1955ನೇ ಇಸವಿಯಲ್ಲಿ ಮಂಜೂರಾದ ಯೋಜನೆಯನ್ನು ಇಲ್ಲಿಯವರೆಗೂ ಕಾರ್ಯಗತ ಮಾಡದೆ ಇರುವುದಕ್ಕೆ ಕಾರಣವೇನು ?

ಶ್ರೀ ಕೆ. ಪುಟ್ಟಸ್ವಾಮಿ.—ಮಾನ್ಯ ಸದಸ್ಯರು ಪುರಸಭೆಯ ಹಣಕಾಸಿನ ಪರಿಸ್ಥಿತಿಯನ್ನು ನೋಡಿದರೆ ಅದು ಗೊತ್ತಾಗುತ್ತದೆ.

ಶ್ರೀ ಪಿ. ವೆಂಕಟಗಿರಿಯಪ್ಪ.—ಆ ರೀತಿ ಅದು ಡಿಲೇ ಆಗುವುದಕ್ಕೆ ಪುರಸಭೆಯ ಹಣಕಾಸಿನ ಪರಿಸ್ಥಿತಿಯೇ ಕಾರಣ ಎಂದು ಮಾನ್ಯ ಮಂತ್ರಿಗಳು ಅಪ್ಪಣೆ ಕೊಡಿಸಿದರು. ಹಾಗಾದರೆ ಪುರಸಭೆಗಳಲ್ಲಿ ಹಣಕಾಸಿನ ಪರಿಸ್ಥಿತಿಯನ್ನು ಉತ್ತಮಪಡಿಸುವುದಕ್ಕೆ ಏನಾದರೂ ಕ್ರಮವನ್ನು ತೆಗೆದುಕೊಂಡಿದ್ದೀರಾ ?

ಶ್ರೀ ಕೆ. ಪುಟ್ಟಸ್ವಾಮಿ.—ನಾವು ಪುರಸಭೆಗೆ ಗಿಣಿಗೆ ಹೇಳಿದ ಹಾಗೆ ಹೇಳಿದ್ದೇವೆ; ಆದರೂ ಅವರು ಕೇಳಲಿಲ್ಲ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಮಾನ್ಯ ಮಂತ್ರಿಗಳು ಗಿಣಿಗೆ ಹೇಳಿದ ಹಾಗೆ ಹೇಳಿದರೂ ಅವರು ಕೇಳಲಿಲ್ಲ ಎಂದು ಹೇಳಿದರು. ಹಾಗಾದರೆ ಪುರಸಭೆಗಳೇನಾದರೂ ಪ್ರಾಣಿಗಳೇ, ಸ್ವಾಮಿ ?

ಶ್ರೀ ಕೆ. ಪುಟ್ಟಸ್ವಾಮಿ.—ನಾವು ಹೇಳಿದ್ದನ್ನು ಗಿಣಿಗಳಾದರೂ ಕಲಿತುಕೊಳ್ಳುತ್ತಿದ್ದವು ಎಂದು ಹೇಳಿದೆ.

ಶ್ರೀ ಇ. ನಾರಾಯಣ ಗೌಡ.—ಆ ಪುರಸಭೆಯವರು ಆ ಕೆಲಸದ ಜವಾಬ್ದಾರಿಯನ್ನು ವಹಿಸಿಕೊಳ್ಳುವುದಕ್ಕೆ ಮೊದಲು ಅವರಿಗೆ ಅಷ್ಟು ಚೈತನ್ಯ ಇದೆಯೋ, ಇಲ್ಲವೇ ಎಂಬುದನ್ನು ಅವರು ಯೋಚನೆ ಮಾಡಲಿಲ್ಲವೆ ?

ಶ್ರೀ ಕೆ. ಪುಟ್ಟಸ್ವಾಮಿ.—1955ನೇ ಇಸವಿಯ ಪರಿಸ್ಥಿತಿಯ ಪ್ರಕಾರ ಆ ಪುರಸಭೆಗೆ ಆ ಚೈತನ್ಯ ಇದೆಯೆಂದು ತಿಳಿದು ಸರ್ಕಾರದವರು ಅದನ್ನು ಮಂಜೂರು ಮಾಡಿದರು.

Constitution of a Committee for the compilation of Kannada Encyclopaedia.

Q.*—455. **Sri A. J. DODDAMETI (Ron).—

Will the Government be pleased to state :—

(*a*) since when the Committee constituted for the compilation of Kannada Encyclopædia has been functioning ;

(*b*) the progress achieved by the said Committee so far ;

(*c*) the period required for the compilation of the work?

A.—**Sri S. R. KANTHI** (Minister for Education).—

(*a*) June 1957.

(*b*) The Sub Committees set up for the subjects, have scrutinised the topics listed under different subjects for inclusion in the Encyclopædia, prepared Kannada equivalents to them and have appointed contributors to write articles on these topics. 30,000 articles have been approved for the Encycloædia so far.

(*c*) It is proposed to complete the work by the end of IV Five-Year Plan, *i.e.*, 1970-71.

ಶ್ರೀ ಎ. ಜೆ. ದೊಡ್ಡಮೇಟಿ.—ವಿಶ್ವಕೋಶದಲ್ಲಿ ಸೇರಿಸಲು 30 ಸಾವಿರ ಲೇಖನಗಳನ್ನು ಈ ವರೆಗೂ ಅನುಮೋದಿಸಲಾಗಿದೆ ಎಂದು ಹೇಳಿದ್ದೀರಿ. ಅವುಗಳು ಈಗಾಗಲೇ ಪ್ರಿಂಟ್ ಆಗಿವೆಯೇ ?

‡ ಶ್ರೀ ಎಸ್. ಆರ್. ಕಂಠಿ.—30 ಸಾವಿರ ಲೇಖನಗಳನ್ನು ಅನುಮೋದಿಸಿದ್ದಾರೆ, ಅದರಲ್ಲಿ ಈಗ 10 ಸಾವಿರ ಲೇಖನಗಳು ಕೈಯಲ್ಲಿ ಬಂದಿದೆ.

Sri G. V. GOWDA.—May I know the number of persons who are asked to write articles ?

ಶ್ರೀ ಎಸ್. ಆರ್. ಕಂಠಿ.—ಅದನ್ನು ಹೇಳುವುದಕ್ಕಾಗುವುದಿಲ್ಲ.

ಶ್ರೀ ಕೆ. ಲಕ್ಕಪ್ಪ.—ವಿಶ್ವಕೋಶವನ್ನು ತಯಾರಿಸುವುದಕ್ಕೆ ರಚಿಸಲ್ಪಟ್ಟಿರುವ ಸಮಿತಿಗೆ ಆಗ ಬೇಕಾದ ಖರ್ಚೆಷ್ಟು ?

ಶ್ರೀ ಎಸ್. ಆರ್. ಕಂಠಿ.—ಒಟ್ಟು 25 ಲಕ್ಷ ರೂಪಾಯಿ ಖರ್ಚಾಗಬೇಕಾಗಿದೆ.

Sri G. V. GOWDA.—What are the number of subjects on which articles have to be written ?

Sri S. R. KANTHI.—All the subjects 30 ಸಾವಿರ ಎಂದರೆ ಎಲ್ಲ ವಿಷಯಗಳೂ ಸೇರಿ ಅಷ್ಟಾಗುತ್ತದೆ. ವಿಶ್ವಕೋಶಕ್ಕೆ ಬೇಕಾಗುವಂಥ ಎಲ್ಲ ವಿಷಯಗಳೂ ಸೇರುತ್ತವೆ. ಈ ವಿಚಾರದಲ್ಲಿ ಒಂದು ಆರ್ಡರಾಗಿದೆ. ಅದನ್ನು ನೋಡಿದರೆ ಗೊತ್ತಾಗುತ್ತದೆ.

Sri S. SIVAPPA.—Has it come to the notice of the Government that an Encyclopaedia in Telugu was completed by the neighbouring Government in a short time of five years ?

ಶ್ರೀ ಎಸ್. ಆರ್. ಕಂಠಿ.—ಅದಾಗಿದೆ. ನಾವೂ ಮಾಡುತ್ತಿದ್ದೇವೆ.

Sri B. R. SUNTHANKAR.—May I know the number of volumes that this would comprise of ?